

**ಸ. ರಘುನಾಥ**

ಕಲೆ: ಪ್ರವೀಣ್ ಆಚಾರ್ಯ

# ರಾಧೆಯ ಗೀತಗೋವಿಂದ



ಅವನು ನೆನಪಾದುದೇ ನೆಪವಾಗಿ ನೆನಪುಗಳು ಸಾಲುಗಟ್ಟಿದವು. ಯಾವ ನೆನಪಿಗೆ ಇಳಿಯಲಿ? ಅವನು ದೇವಕಮ್ಮನ ಮಡಿಲಿಗೆ ಬಂದ ಆ ರಾತ್ರಿಗೆ? ನನ್ನ ಹೃದಯ ಅರಳಿಸಿದಲ್ಲಿಗೆ? ರಾಸಲೀಲೆಗೆ? ಚಂದ್ರನ ಚೆಲುವನ್ನು ತೋರಿಸಿದ ಆ ನವಮಿ ದಿನಕ್ಕೆ... ಎಂದು ಇತ್ಯರ್ಥ ಮಾಡಕೊಳ್ಳುವುದರಲ್ಲಿ ಇರುವಾಗಲೇ ಕರುವೊಂದು 'ಅಂಬಾ' ಎಂದಿತು. ಹಾಲು ಸಾಕಾಗಲಿಲ್ಲವೊ? ಪರಧ್ಯಾನದಲ್ಲಿ ಅದರ ಹೊಟ್ಟೆತುಂಬುವಷ್ಟು ಬಿಡದೆ ಹಿಂಡಿಬಿಟ್ಟೆನೆ? ಸ್ವಲ್ಪ ಹೊತ್ತು ಕಿವಿದೆರೆದು ಆಲಿಸಿದೆ. ಪ್ರತಿಯಾಗಿ ಅದರ ಅಮ್ಮ 'ಅಂಬಾ' ಅನ್ನಲಿಲ್ಲ. ಅಂದರೆ ಹೊಟ್ಟೆತುಂಬ ಕುಡಿದಿದೆ. ಮನಸ್ಸಿಗೆ ನೆಮ್ಮದಿಯಾಯಿತು. ನನ್ನ ಹಾಗೆ ಏನಾದರು ನೆನಪಾಗಿ ನಿದ್ದೆ ಹತ್ತದೆ ಕೂಗಿಕೊಂಡಿತೆ? ಕರುವಿಗೆಂಥ ನೆನಪು! ಕೆಟ್ಟಕನಸು ಕಂಡಿತೆ? ಕನಸೆ ಅದಕ್ಕೆ? ಅದೂ ಜೀವ ತಾನೆ! ನೆನಪು, ಕನಸುಗಳು ಇರವೆ? ಏನಾದರಾಗಲಿ ನೋಡಿ ಬರವುದೊಳ್ಳೆಯದು. ಹಣತೆ ಹಿಡಿದು ದೊಡ್ಡಿಯತ್ತ ಹೊರಟೆ. ಕರುಗಳೆಲ್ಲ ಕಾಲು ಮಡಚಿ, ನೆಲಕ್ಕೆ ಮೂತಿಯೂರಿ ಮಣ್ಣಿನ ವಾಸನೆಯ ಹಿತದಲ್ಲಿ ಮಲಗಿದ್ದವು. ಹಸುಗಳು ಮೆಲುಕು ಮುಗಿಸಿ ತಮಗೆ ಸುಖವೆನಿಸುವ ಭಂಗಿಗಳಲ್ಲಿ ಮಲಗಿದ್ದವು. ಗೋವರ್ಧನಗಿರಿಯೇರಿ, ಮೇವಿಗೆ ಅಲೆದು ಇಳಿಯುವುದೇನು ಸುಲಭವಲ್ಲ. ದಣಿವು ನಿಮ್ಮಲ್ಲೆ ಇರುವೆನೆಂದು ಕವಿದು ಮಲಗಿಸಿಬಿಡುತ್ತದೆ. ದಣಿವೇ ಅವಕ್ಕೆ ಲಾಲಿಹಾಡು. ಹಸುವೊಂದು ಮಲಗಿದಂತೆಯೇ ಸಗಣಿ ಹಾಕಿತು. ಬಳಲಿಕೆ ಎಚ್ಚರಾಗಿಸಿ ಎದ್ದು ನಿಂತು ತಪ್ಪೆ ಹಾಕಲು ಅವಕಾಶ ಕೊಟ್ಟಿರಲಿಲ್ಲ. ಮಕ್ಕಳು ಬಟ್ಟೆಯಲ್ಲೇ ಮಾಡಿಕೊಳ್ಳುವುದಿಲ್ಲವೆ ಹಾಗೆ. ಹಸುಗಳೂ ಮಕ್ಕಳಂತೆಯೇ. ಅಡುಗೆಮನೆಯಲ್ಲಿ ಏನೋ ಸಪ್ಪಳ. ಅವನು ಹಾಲ್ಬೆಣ್ಣೆ ಕದಿಯುವಾಗ ಆಗುತಿದ್ದಂತೆ. ಹೋಗಿ ನೋಡಿದೆ.